ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು -1.

ಸಂಖ್ಯೆ: ಅ2 (2) ಶಾ.ಮ. ದೈ. ಶಿ.ನಿ. -1/2007-08 ದಿನಾಂಕ: 30-8-2007

## ಸುತ್ತೋಲೆ

ವಿಷಯ : ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷೆ ನಿಷೇಧಿಸುವ ಬಗ್ಗೆ.

ಉಲ್ಲೇಖ :
1) ದೆಹಲಿ ಉಚ್ಛನ್ಯಾಯಾಲಯದ ಆದೇಶ ದಿನಾಂಕ : 01-12-2000.
2) ಸರ್ಕಾರದ ಸುತ್ತೋಲೆ ಸಂಖ್ಯೆ : ಇಡಿ 83 ಪಿಜಿಸಿ 2005. ದಿನಾಂಕ : 1-6-2005.
3) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಸಾ. ಸಂ. ಅ. ಶಿ. ಅರಿವು 1/2005-06. ದಿನಾಂಕ : 16-1-2006.
4) ಈ ಕಛೇರಿಯ ಸುತ್ತೋಲೆ ಸಂಖ್ಯೆ : ಆ 1(4) ಪ್ರಾ.ಶಿ. ಎಸ್.ಡಿ.ಎಂ.ಸಿ.ಪುರ 1/2006-07, ದಿನಾಂಕ : 13-07-2006.

---

ಶಿಕ್ಷಣ ಪ್ರತಿ ಮಗುವಿನ ಮೂಲಭೂತ ಹಕ್ಕಾಗಿದೆ. ಕರ್ನಾಟಕದಲ್ಲಿ ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲು ಹಾಗೂ ಶಾಲಾ ಹಂತ ಮುಗಿಯುವವರೆಗೂ ಶಾಲೆಗಳಲ್ಲಿ ಉಳಿಸಿಕೊಂಡು, ಅವರಿಗೆ ಜೀವನಕ್ಕೆ ಉಪಯುಕ್ತವಾದ ಗುಣಾತ್ಮಕ ಶಿಕ್ಷಣ ನೀಡಲು ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅನೇಕ ಮಕ್ಕಳು ಶಾಲೆಗಳಿಗೆ ದಾಖಲಾಗಿ ನಂತರ ಶಾಲೆ ಬಿಡುತ್ತಿರುವುದಕ್ಕೆ ಹಲವಾರು ಕಾರಣಗಳಿದ್ದು, ಅವುಗಳ ಪೈಕಿ ಅಹಿತಕರವಾದ ಶಾಲೆಯ ವಾತಾವರಣ, ಕೆಲವು ಶಿಕ್ಷಕರಿಗೆ ಬಾಲ ಮನೋವಿಜ್ಞಾನದ ಮೂಲಜ್ಞಾನ ಇಲ್ಲದಿರುವುದು ಹಾಗೂ ನಕಾರಾತ್ಮಕ ಮನೋಧರ್ಮವೂ ಸಹ ಕಾರಣವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ಕಠಿಣ ಶಿಕ್ಷೆಗಳನ್ನು ನೀಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು ಮಾಧ್ಯಮಗಳಲ್ಲೂ ಸಹ ಪ್ರಕಟಗೊಳ್ಳುತ್ತಿದೆ. ಇದರಿಂದ ಮಕ್ಕಳ ಭವಿಷ್ಯದ ಮೇಲೆ ಘೋರವಾದ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೆ ಶಿಕ್ಷಕರು, ಶಾಲೆ, ಶಾಲಾಡಳಿತ ಮತ್ತು ಶಿಕ್ಷಣ ವ್ಯವಸ್ಥೆಯು ಸಮಾಜದ ಕೆಂಗಣ್ಣಿಗೆ ಗುರಿಯಾಗಿದೆ. ಉದಾಹರಣೆಗೆ :-

★ ಮಂಡ್ಯ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಶಾಲಾ ಮಕ್ಕಳ ಮೇಲೆ ಲೈಂಗಿಕ ಹಲ್ಲೆ

★ ಬೆಂಗಳೂರು ನಗರದಲ್ಲಿ ಮಕ್ಕಳಿಗೆ ಶಿಕ್ಷಕರಿಂದ ಕಠಿಣ ದೈಹಿಕ ಶಿಕ್ಷೆ

★ ಹಾಸನ ಜಿಲ್ಲೆಯಲ್ಲಿ ಹಸಿದ ಮಗುವು, ಮಧ್ಯಾಹ್ನ ಬಿಸಿಯೂಟದಲ್ಲಿ ಇನ್ನೂ ಸ್ವಲ್ಪ ಅನ್ನ ಬಡಿಸಿರೆಂದು ಕೇಳಿದಾಗ ಶಿಕ್ಷಕರಿಂದ ಹೊಡೆತ.

★ ಶಾಲಾಡಳಿತದ ನಿರ್ಲಕ್ಷ್ಯದಿಂದ ಶಾಲಾ ಮಗುವಿನ ಮೇಲೆ ಇಟ್ಟಿಗೆ ಬಿದ್ದು ಸಾವು

★ ಸುರಕ್ಷಿತವಲ್ಲದ ಶಾಲಾ ಕಟ್ಟಡದಿಂದ ಮಗು ಬಿದ್ದು ಸಾವು ಇತ್ಯಾದಿಗಳು ಅತ್ಯಂತ ಶೋಚನೀಯವಾದಂತಹ ಪ್ರಕರಣಗಳಾಗಿರುತ್ತವೆ.

ಬಹುತೇಕ ಸಂದರ್ಭಗಳಲ್ಲಿ ಮಕ್ಕಳು ತಮ್ಮ ಮೇಲಿನ ದೌರ್ಜನ್ಯ ಮತ್ತು ಶಿಕ್ಷೆಗಳಿಗೆ ಯಾವುದೇ ಪ್ರತಿರೋಧವಿಲ್ಲದೆ ತಮ್ಮನ್ನೇ ಅರ್ಪಿಸಿಕೊಂಡು ಮೂಕರಾಗಿ ಶಿಕ್ಷೆ ಅನುಭವಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ತಮ್ಮ ಆಳವಾದ ನೋವನ್ನು ತಮ್ಮ ಭಾವನೆಗಳ ಮೂಲಕ ವ್ಯಕ್ತಪಡಿಸುತ್ತಾರಾದರೂ ಯಾರ ಗಮನಕ್ಕೂ ಬಾರದೆ ಮಾನಸಿಕವಾಗಿ ತೀವ್ರ ಯಾತನೆ ಅನುಭವಿಸುತ್ತಾ ಮೌನದ ಮೊರೆ ಹೋಗುತ್ತಾರೆ. ಇದು ಇವರ ಮೇಲೆ ನಂತರದ ಕ್ರೌರ್ಯಗಳಿಗೂ ಕಾರಣವಾಗುತ್ತದೆ.

## ದೈಹಿಕ ಶಿಕ್ಷೆ ಎಂದರೆ :

★ ವಿದ್ಯಾರ್ಥಿಗಳನ್ನು ಶಾಲಾ ಆವರಣದಲ್ಲಿ ಓಡಲು ಸೂಚಿಸುವುದು.

★ ತುಂಬಾ ಸಮಯ ತರಗತಿಯಲ್ಲಿ ನಿಲ್ಲಿಸುವುದು.

★ ಕುರ್ಚಿ ರೂಪದಲ್ಲಿ ಕೂರಿಸುವುದು.

★ ಕೀಲುಗಳ ಮೇಲೆ ಹೊಡೆಯುವುದು.

★ ಚಿವುಟುವುದು

★ ಕೋಲು ಅಥವಾ ಸ್ಕೇಲ್‌ನಿಂದ ಹೊಡೆಯುವುದು.

★ ಕೆನ್ನೆಗೆ ಹೊಡೆಯುವುದು.

★ ಮಕ್ಕಳ ಎದುರಿನಲ್ಲಿ ನಿಂದಿಸುವುದು.

★ ಮಾನಸಿಕವಾಗಿ ಹಿಂಸಿಸುವುದು.

★ ಶಾಲಾ ಕೊಠಡಿಯಲ್ಲಿ ಕೂಡಿ ಹಾಕುವುದು.

★ ಲೈಂಗಿಕ ಕಿರುಕುಳದ ಎಲ್ಲಾ ಪ್ರಯತ್ನಗಳು, ಇತ್ಯಾದಿಗಳು ಒಳಗೊಂಡಿರುತ್ತವೆ.

ಈ ರೀತಿಯ ಚಟುವಟಿಕೆಗಳು ಮಕ್ಕಳ ಮನಸ್ಸಿನ ಮೇಲೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಉಂಟು ಮಾಡಿ ಅವಮಾನ ಮತ್ತು ಅಘಾತಕ್ಕೆ ಅವಕಾಶ ಮಾಡಿಕೊಡುವುದರಿಂದ ಮಕ್ಕಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಭಯದ ವಾತಾವರಣದಲ್ಲಿ ಮಕ್ಕಳು ಕಲಿಕೆಯ ಕಡೆ ಗಮನ ನೀಡದೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಮೌನವಾಗಿ ಸ್ವೀಕರಿಸಿ ಕಡೆಗೊಮ್ಮೆ ಕ್ರೌರ್ಯದ ಮೊರೆ ಹೋಗುವ ಸಾಧ್ಯತೆ ಇದ್ದು, ಶಾಲೆಗಳಲ್ಲಿ ಮತ್ತು ಸಮಾಜದಲ್ಲಿ ಅಶಿಸ್ತಿಗೆ ಅವಕಾಶವಾಗುತ್ತದೆ.

ಮಕ್ಕಳಿಗೆ ನೀಡುವ ಯಾವುದೇ ರೀತಿಯ ಶಿಕ್ಷೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳನ್ನು ಶಿಸ್ತಿಗೆ ಒಳಪಡಿಸುವುದು. ದೈಹಿಕ ಶಿಕ್ಷೆ ನೀಡುವುದು ಒಂದು ಸಾಮಾನ್ಯ ಕ್ರಮ ಎಂದು ಕೆಲವು ಶಿಕ್ಷಕರು ಭಾವಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಮುಗ್ಧ ಮಕ್ಕಳನ್ನು ಶಿಕ್ಷೆಯ ಮೂಲಕ ಶಿಸ್ತಿಗೆ ಒಳಪಡಿಸುವುದಾಗಲಿ, ಭಯದ ವಾತಾವರಣದಲ್ಲಿ ಉತ್ತಮ ಮಟ್ಟದ ಕಲಿಕೆಯನ್ನು ಸಾಧಿಸುವುದಾಗಲಿ ಸಾಧ್ಯವಾಗುವುದಿಲ್ಲ.

ವಿದ್ಯಾರ್ಥಿಗಳ ವರ್ತನೆ ಸುಧಾರಣೆಗೆ, ಶಿಕ್ಷೆಗಿಂತ ಅಕ್ಕರೆಯೇ ಪರಿಣಾಮಕಾರಿಯಾದ ಅಸ್ತ್ರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳು ನಿರ್ಭಯವಾದ ವಾತಾವರಣದಲ್ಲಿ ಸ್ವಚ್ಛಂದತೆಯಿಂದ ಉಲ್ಲಾಸದಾಯಕವಾಗಿ ಕಲಿಯಲು ಅವಕಾಶ ಮಾಡಿಕೊಡಲು ದೈಹಿಕ ಶಿಕ್ಷೆಯನ್ನು ದೆಹಲಿ ಉಚ್ಚ ನ್ಯಾಯಾಲಯ ದಿನಾಂಕ : 01-12-2000 ದ ತೀರ್ಪಿನಲ್ಲಿ ನಿಷೇಧಿಸಿದೆ.

ಮಕ್ಕಳು ವಯಸ್ಕರಂತೆಯೇ ಅತ್ಯಂತ ಮಾನವೀಯ ಮತ್ತು ಸೂಕ್ಷ್ಮ ಗುಣವುಳ್ಳವರಾಗಿರುತ್ತಾರೆ. ಅವರನ್ನು ಸುರಕ್ಷಾ ವಾತಾವರಣದಲ್ಲಿ ಬೆಳೆಸುವ ಮತ್ತು ನೋಡಿಕೊಳ್ಳುವ ಅವಶ್ಯಕತೆ ಇರುತ್ತದೆ. ಅಹಿಂಸೆಯನ್ನು ಉನ್ನತ ಸಾಂಸ್ಕೃತಿಕ ಮೌಲ್ಯವಾಗಿ ಆಚರಿಸುವುದು, ಮಕ್ಕಳನ್ನು ಮಕ್ಕಳನ್ನಾಗಿಯೇ ನೋಡುವುದರ ಮೂಲಕ ಆರಂಭವಾಗುತ್ತದೆ. ಮಕ್ಕಳೊಂದಿಗೆ ಅಹಿಂಸಾತ್ಮಕವಾಗಿ ನಡೆದುಕೊಳ್ಳುವುದು ವಯಸ್ಕರ ಕರ್ತವ್ಯವಾಗಿದೆ. ಈ ರೀತಿಯ ಸಂಸ್ಕೃತಿಯನ್ನು ಬೆಳೆಸುವುದರಿಂದ ಮಕ್ಕಳನ್ನು ಜವಾಬ್ದಾರಿಯುತ ನಾಗರೀಕರನ್ನಾಗಿ ಬೆಳಸಲು ಸಾಧ್ಯವಾಗುತ್ತದೆ.

ಶಿಕ್ಷೆಯಿಂದ ಮುಕ್ತವಾದ ವಾತಾವರಣ ಹಾಗೂ ಸುರಕ್ಷತೆಯನ್ನು ಮಕ್ಕಳಿಗೆ ಒದಗಿಸುವುದು. ಶಾಲೆಗಳ, ಶಿಕ್ಷಕರ, ಆಡಳಿತ ಮಂಡಳಿಗಳ, ಶೈಕ್ಷಣಿಕ ಆಡಳಿತಾಗರರ ಜವಾಬ್ದಾರಿಯಾಗಿದೆ.

ಈ ಹಿನ್ನಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದನ್ನು ನಿಲ್ಲಿಸಲು ಉಲ್ಲೇಖದಲ್ಲಿನ ಸರ್ಕಾರದ ಮತ್ತು ಇಲಾಖೆಯ ಸುತ್ತೋಲೆಗಳಲ್ಲಿ ಹಲವಾರು ಸೂಚನೆಗಳನ್ನು ನೀಡಿದ್ದರೂ ಸಹ ಈಗಲೂ ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುತ್ತಿರುವ ಬಗ್ಗೆ ದೂರುಗಳು ಇಲಾಖೆ / ಸರ್ಕಾರದ ಗಮನಕ್ಕೆ ಬಂದಿವೆ. ಮಾಧ್ಯಮಗಳಲ್ಲೂ ಸಹ ಈ ವಿಷಯಗಳನ್ನು ಗಮನಿಸಲಾಗಿದೆ.

ಈ ಬಗ್ಗೆ ಘನ ನ್ಯಾಯಾಲಯ ಮತ್ತು **ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಇದನ್ನು ತೀವ್ರವಾಗಿ ಪರಿಗಣಿಸಿ ತಮ್ಮ ಗಂಭೀರವಾದ ಕಳವಳವನ್ನು ವ್ಯಕ್ತಪಡಿಸಿ ಮಕ್ಕಳ ಮೇಲಿನ ದೈಹಿಕ ಶಿಕ್ಷೆಗಳನ್ನು ಹತ್ತಿಕ್ಕಲು ನಿರ್ದೇಶಿಸಿವೆ.

ಈ ಗುರುತರ ಜವಾಬ್ದಾರಿ ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಅಧಿಕಾರಿಗಳು, ಆಡಳಿತ ಮಂಡಳಿಗಳು, ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಕರು ಹಾಗೂ ಪೋಷಕರು ಇವರೆಲ್ಲರ ಸಕ್ರಿಯ ಸಹಕಾರ ಅಗತ್ಯ.

ಈ ಹಿನ್ನೆಲೆಯಲ್ಲಿ ಈಗಾಗಲೇ ಹೊರಡಿಸಿರುವ ಸರ್ಕಾರದ ಮತ್ತು ಈ ಕಛೇರಿಯ ಸುತ್ತೋಲೆಗಳಲ್ಲಿನ ಎಲ್ಲಾ ಸೂಚನೆಗಳನ್ನು ಪುರುಚ್ಚರಿಸುತ್ತಾ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದೆ.

1. ಶಾಲೆಗಳಲ್ಲಿ ದೈಹಿಕ ಶಿಕ್ಷೆ ನೀಡುವುದನ್ನು ಪ್ರಶ್ನಿಸುವ ಮತ್ತು ದೂರುಗಳನ್ನು ದಾಖಲಿಸುವ ಮನೋಸ್ಥೈರ್ಯವನ್ನು ಮೂಡಿಸುವುದು. ಶಿಕ್ಷಕರಿಗೆ ಮಾನವೀಯ ಮೌಲ್ಯಗಳನ್ನು ಆಧರಿಸಿದ ಹಾಗೂ ಮಕ್ಕಳ ಮನೋವಿಜ್ಞಾನ ಹಿನ್ನೆಲೆಯುಳ್ಳ ತರಬೇತಿಯನ್ನು ನೀಡುವುದು ಹಾಗೂ ಪೋಷಕರಿಗೆ ಈ ಬಗ್ಗೆ ಅರಿವು ಮೂಡಿಸುವುದು.

2. ಪ್ರತಿ ಶಾಲೆಯಲ್ಲಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಇತರೆ ಸಂಸ್ಥೆಗಳಾದ ವಿದ್ಯಾರ್ಥಿ ನಿಲಯಗಳು, ಅನಾಥಾಶ್ರಮಗಳು, ರಿಮ್ಯಾಂಡ್ ಹೋಂಗಳು ಮತ್ತು ಮಕ್ಕಳಿಗಾಗಿಯೇ ಇರುವ ಇತರೆ ಸಾರ್ವಜನಿಕ ಸಂಸ್ಥೆಗಳಲ್ಲಿ ಮಕ್ಕಳು ತಮ್ಮ ಮನೋಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅನುಕೂಲವಾಗುವ ವಾತಾವರಣ ಸೃಜನೆ ಮತ್ತು ಸಂಘಟನೆಯನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು. ಇದಕ್ಕೆ ಮಕ್ಕಳು ಯಾವುದಾದರೂ ಸ್ವಯಂ ಸೇವಾ ಸಂಸ್ಥೆಗಳ / ವ್ಯಕ್ತಿಗಳ ನೆರವು ಪಡೆದುಕೊಳ್ಳಲು ಅವಕಾಶ ಮಾಡಿಕೊಳ್ಳುವುದು.

3. ಮಕ್ಕಳು ದೂರು ನೀಡುವುದಕ್ಕಾಗಿಯೇ ಪ್ರತ್ಯೇಕ ದೂರು ಪೆಟ್ಟಿಗೆಯನ್ನು ಪ್ರತಿ ಶಾಲೆಯಲ್ಲೂ ಅಳವಡಿಸುವುದು. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಸರ್ಕಾರಿ ಶಾಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ನೀಡುವ ಶಾಲಾ ಅನುದಾನದಲ್ಲಿ, ಖಾಸಗಿ ಸಂಸ್ಥೆಗಳಾದಲ್ಲಿ ಆಡಳಿತ ಮಂಡಳಿಗಳಿಂದ ವೆಚ್ಚ ಭರಿಸತಕ್ಕದ್ದು, ಒಂದು ವೇಳೆ ಅನಾಮಧೇಯ ದೂರುಗಳಿದ್ದರೂ ಸಹ ಕ್ರಮ ತೆಗೆದುಕೊಳ್ಳುವುದು.

4. ಪ್ರತಿ ತಿಂಗಳು ಶಿಕ್ಷಕ - ಪೋಷಕ ಸಂಘ ಅಥವಾ ಎಸ್.ಡಿ.ಎಂ.ಸಿ. ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ನಾಗರೀಕ ಸೌಲಭ್ಯಗಳ ಸಮಿತಿ' ಗಳ ಸಭೆಯನ್ನು ಕರೆದು ದೂರುಗಳ ಬಗ್ಗೆ ಪರಿಶೀಲನೆ ನಡೆಸುವುದು ಮತ್ತು ಕ್ರಮ ತೆಗೆದುಕೊಳ್ಳುವುದು. ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಪ್ರತಿ ತಿಂಗಳು ನಡೆಯುವ ಸಭೆಗಳಲ್ಲಿ ಇದನ್ನು ಅಜೆಂಡಾ ಅಂಶವಾಗಿಟ್ಟು ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳುವುದು.

5. ಸರ್ಕಾರದ ಆದೇಶ ಸಂಖ್ಯೆ : ಇಡಿ 122 ಪಿಬಿಎಸ್. 2004, ದಿನಾಂಕ 14-6-2006 ರಲ್ಲಿ ಕರ್ನಾಟಕ ಗ್ರಾಮ ಪಂಚಾಯಿತಿಗಳ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ) (ಮಾದರಿ) ಉಪ ವಿಧಿಗಳು, 2006 ರಚಿಸಿ ಆದೇಶ ಹೊರಡಿಸಲಾಗಿದೆ. ಇದರ ಅಧ್ಯಾಯ -5 ರ 17ಸಿ (1) ರಿಂದ (4) ವರೆಗಿನ ಅಂಶಗಳಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಪ್ರಾಸ್ತಾಪಿಸಿ ಈ ಬಗ್ಗೆ ಏನಾದರೂ ಮಕ್ಕಳಿಗೆ ತೊಂದರೆಯಾದಲ್ಲಿ ನೇರವಾಗಿ ಅಥವಾ ದೂರು ಪೆಟ್ಟಿಗೆ ಮುಖಾಂತರವಾಗಲಿ ನಾಗರೀಕ ಸೌಲಭ್ಯಗಳ ಸಮಿತಿಗೆ ಮೌಖಿಕ ಅಥವಾ ಲಿಖಿತ ದೂರನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ತೊಂದರೆಗೊಳಗಾದ ಮಕ್ಕಳು / ಅವರ ಪೋಷಕರು ಮಕ್ಕಳ ಮೇಲಿನ ದೂರುಗಳನ್ನು ಸ್ವೀಕರಿಸಲು ಪ್ರಥಮ ಪ್ರಾಧಿಕಾರವಾದ ಎಸ್.ಡಿ.ಎಂ.ಸಿ. ಗೆ ಘಟನೆ ನಡೆದ ತಕ್ಷಣ ದೂರು ನೀಡಿ ಸ್ವೀಕೃತಿ ಪಡೆಯುವುದು.

6. ವಿದ್ಯಾರ್ಥಿಗಳ ಮೇಲಾದ ದೌರ್ಜನ್ಯದ ಬಗ್ಗೆ ದೂರುಗಳು ಬಂದ ತಕ್ಷಣ ಎಸ್‌ಡಿಎಂಸಿ ಯು ಸಮಯ ಮುಂದೂಡದೆ, ಕೂಡಲೇ ಕ್ರಮ ಕೈಗೊಳ್ಳುವುದು.

7. ಮಕ್ಕಳು ಹಾಗೂ ಪೋಷಕರು ಮಕ್ಕಳ ಮೇಲಿನ ದೌರ್ಜನ್ಯ / ದೈಹಿಕ ಶಿಕ್ಷೆಗಳ ವಿರುದ್ಧ ನಿರ್ಭಯವಾಗಿ ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.

8. ಪ್ರತಿ ಶಾಲೆಯಲ್ಲಿ ಈಗಾಗಲೇ ರಚಿಸಲಾಗಿರುವ "ಮಕ್ಕಳ ಹಕ್ಕುಗಳ ಕ್ಲಬ್" ಗಳನ್ನು ಪುನಶ್ಚೇತನಗೊಳಿಸುವುದು. ಒಂದು ವೇಳೆ ಈ ವರೆವಿಗೂ "ಮಕ್ಕಳ ಹಕ್ಕುಗಳ ಕ್ಲಬ್" ಗಳನ್ನು ರಚಿಸಿರದಿದ್ದರೆ ಎಲ್ಲಾ ಸರ್ಕಾರಿ / ಅನುದಾನಿತ / ಅನುದಾನರಹಿತ ಶಾಲೆಗಳಲ್ಲಿ ಕೂಡಲೇ ರಚಿಸುವುದು.

9. ಮಕ್ಕಳ ಮೇಲಿನ ದೌರ್ಜನ್ಯ / ದೈಹಿಕ ಶಿಕ್ಷೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ವಾರಕ್ಕೊಮ್ಮೆ ಶಾಲೆಯ ಮುಖ್ಯಸ್ಥರು ಮಕ್ಕಳೊಂದಿಗೆ ಮುಕ್ತವಾಗಿ ಸಂವಾದ ನಡೆಸುವುದು.

10. ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ನಡೆಯುವ ಸಭೆಗಳಲ್ಲಿ ಇದನ್ನು ಅಜೆಂಡಾ ಅಂಶವಾಗಿಟ್ಟು ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳುವುದು.

11. ಮಕ್ಕಳಿಗೆ ಕೇವಲ ಶಿಕ್ಷಕರಿಂದಾಗುವ ದೌರ್ಜನ್ಯ / ದೈಹಿಕ ಶಿಕ್ಷೆ ಅಲ್ಲದೆ ಪೋಷಕರು ಹಾಗೂ ಇತರರಿಂದ ಆಗುವ ಇಂತಹ ಪ್ರಕರಣಗಳನ್ನು ಹತ್ತಿಕ್ಕಲು ಶಾಲಾ ಆಡಳಿತ / ಶೈಕ್ಷಣಿಕ ಆಡಳಿತ ವ್ಯವಸ್ಥೆ ಕ್ರಮ ವಹಿಸತಕ್ಕದ್ದು. ಈ ಸಂಬಂಧ ಪೋಷಕರ ಸಭೆಗಳಲ್ಲಿ ಅರಿವು ಮೂಡಿಸುವುದು.

12. ಮಕ್ಕಳ ಮೇಲಿನ ದೌರ್ಜನ್ಯ / ದೈಹಿಕ ಶಿಕ್ಷೆ / ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಪ್ರತಿ ಹಂತದಲ್ಲೂ ಯಾರಿಗೆ ತಿಳಿಸಬೇಕು ಎಂಬ ವಿವರಗಳನ್ನು (ಸ್ಪಷ್ಟ ವಿಳಾಸ, ದೂರವಾಣಿ ಸಂಖ್ಯೆ) ಶಾಲೆ/ ಕಛೇರಿಗಳ ಮುಂದೆ ಅಧಿಕೃತವಾಗಿ ಪ್ರಕಟಿಸತಕ್ಕದ್ದು.

13. ದೂರುಗಳಿದ್ದಲ್ಲಿ ಈ ಕೆಳಕಾಣಿಸಿದ ವಿಳಾಸಕ್ಕೆ ದೂರು ನೀಡಬಹುದು.

| ದೂರಿನ ವ್ಯಾಪ್ತಿ | ದೂರು ಸಲ್ಲಿಸಬೇಕಾದ ವಿಳಾಸ |
|---|---|
| ಬೆಂಗಳೂರು ಮತ್ತು ಮೈಸೂರು ವಿಭಾಗದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ | ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| ಎಂಗಳೂರು ಮತ್ತು ಮೈಸೂರು ವಿಭಾಗದ ಪ್ರೌಢಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ | ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. |
| ಧಾರವಾಡ ಆಯುಕ್ತಾಲಯ ವ್ಯಾಪ್ತಿಯ ಪ್ರಾಥಮಿಕ / ಪ್ರೌಢ ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ | ನಿರ್ದೇಶಕರು, ಅಪರ ಆಯುಕ್ತಾಲಯ, ಧಾರವಾಡ. |
| ಗುಲ್ಬರ್ಗಾ ಆಯುಕ್ತಾಲಯ ವ್ಯಾಪ್ತಿಯ ಪ್ರಾಥಮಿಕ/ ಪ್ರೌಢಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ | ನಿರ್ದೇಶಕರು, ಅಪರ ಆಯುಕ್ತಾಲಯ, ಗುಲ್ಬರ್ಗಾ. |

ಮೇಲಿನ ಸೂಚನೆಗಳಲ್ಲಿ ಯಾವುದೇ ಲೋಪವಾದರೂ ಆಯಾ ಶಾಲೆಯ ಮುಖ್ಯಸ್ಥರು, ಶಾಲಾ ಆಡಳಿತ ಮಂಡಳಿ ಹಾಗೂ ಇಲಾಖೆಯ ಕ್ಲಸ್ಟರ್, ಬ್ಲಾಕ್, ಜಿಲ್ಲಾ ಹಂತದ ಅಧಿಕಾರಿಗಳನ್ನು ನೇರ ಹೊಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಜಿ. ಕುಮಾರ ನಾಯಕ ಭಾ.ಆ.ಸೇ.)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ,

1) ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
3) ರಾಜ್ಯದ ಎಲ್ಲಾ ಕ್ಲಸ್ಟರ್ ಸಹಾಯಕ ಶಿಕ್ಷಣಾಧಿಕಾರಿಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)
4) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

**ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ :-**

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ
2) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.

**ಪ್ರತಿಗಳನ್ನು ಗೌರವಪೂರ್ವಕವಾಗಿ ಸಲ್ಲಿಸಿದೆ. :**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ ಬೆಂಗಳೂರು , ಇವರಿಗೆ.
2. ಸರ್ಕಾರದ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು. ಇವರಿಗೆ.
3. ಡಾ. ಶಾಂತಾ ಸಿನ್ಹ, ಅಧ್ಯಕ್ಷರು, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ.ನಂ. 103. ಪಾರ್ಲಿಮೆಂಟರಿ ಹೌಸ್, ನವದೆಹಲಿ.